

ದೇವಾಲಯದಲ್ಲಿ ನಿರ್ಮಾಣವಾಗಿರುವ ಸಣ್ಣ ಸಣ್ಣ ಮನೆಗಳು ಅಥವಾ ಗೂಡುಗಳು.

ನಾಯಕ ಸಮುದಾಯ ತಮ್ಮ ಜಾನುವಾರುಗಳ ಸಮೇತ ಬಂದು, ಹೊಸ ಜೀವನವನ್ನು ಆರಂಭಿಸಿತು. ಹೀಗಾಗಿಯೇ ಇದಕ್ಕೆ ನಾಯಕನಹಟ್ಟಿ ಎಂಬ ಹೆಸರು ಬಂತು ಎನ್ನುವುದು ಹಿರಿಯರು ಹೇಳುವ ಮಾತು. ಈ ಕಾಕಳನಾಯಕನೇ ಹಟ್ಟಿಯ ಮೂಲ ಪುರುಷ ಎನ್ನಲಾಗುತ್ತಿದೆ.

ಕಾಕಳ ನಾಯಕನ ತರುವಾಯ ಈತನ ಮಗನಾದ ದೊಡ್ಡಿಲಸ ಮಲ್ಲಪ್ಪನಾಯಕ ಪಟ್ಟಕ್ಕೆ ಬರುತ್ತಾನೆ. ಇವನ ನಂತರ ಮಕ್ಕಳಾದ ಎರಡನೆಯ ಬೂದಿಮಲ್ಲಪ್ಪನಾಯಕನಿಗೆ ದೊರೆತನ ಪ್ರಾಪ್ತವಾಗುತ್ತದೆ. ಇವನಿಗೆ ಚಿತ್ರದುರ್ಗದ ಪಾಳೇಗಾರನಾದ ಚಿಕ್ಕಣ್ಣನಾಯಕರ ತಂಗಿ ಸರ್ಜಮ್ಮ ನಾಗತಿಯನ್ನು ವಿವಾಹ ಮಾಡಿಕೊಟ್ಟು ಪ್ರವರ್ಧಮಾನಕ್ಕೆ ಬರಲು ಚಿತ್ರದುರ್ಗ ಪಾಳೇಗಾರರು ಸಹಕರಿಸಿದರು ಎನ್ನುವುದು ಪ್ರತೀತಿ.

ಬೂದಿ ಮಲ್ಲಪ್ಪನಾಯಕನ ಸಹೋದರಿಯಾದ ಹಟ್ಟಿಮಲ್ಲವ್ವ ನಾಗತಿಯು ರಾಜ ಬಿಕ್ಕಣ್ಣ ನಾಯಕನ ಅನೇಕ ಪತ್ನಿಯರಲ್ಲಿ ಒಬ್ಬಳು. ವೈವಾಹಿಕ ಸಂಬಂಧಗಳ ಮೂಲಕ ಬಲಿಷ್ಟರಾಗಿದ್ದ ಚಿತ್ರದುರ್ಗದ ಪಾಳೆಗಾರರು ಹಟ್ಟಿ ಪಾಳೇಗಾರರಿಗೆ ನೆಂಟರಾಗಿದ್ದರಿಂದ ಉತ್ತಮ ಬಾಂಧವ್ಯವೂ ಇತ್ತು.

ದೇವಾಲಯದ ಶೈಲಿ:– ಹಟ್ಟಿ ಪಾಳೇಗಾರರಲ್ಲೇ ಹೆಸರಾದ ಬೂದಿಮಲ್ಲಪ್ಪ ನಾಯಕನಿಂದ ರಾಮದುರ್ಗ ಗ್ರಾಮದ ಬಳಿ ಈ ಗುಹಾಂತರ ರಾಮಲಿಂಗೇಶ್ವರ ದೇವಾಲಯ, 17 ಅಥವಾ 18ನೇ ಶತಮಾನದಲ್ಲಿ ನಿರ್ಮಾಣವಾಗಿದೆ ಎನ್ನಲಾಗುತ್ತಿದೆ. ಆದರೆ ಇಲ್ಲಿಯ ಶಿಲ್ಪಗಳನ್ನು ಕಡೆದ ಕಲಾವಿದ ಯಾರು ಎಂಬುದು ತಿಳಿದಿಲ್ಲ. ಗುಹಾಂತರ ದೇವಾಲಯ ದ್ರಾವಿಡ ಶೈಲಿಯಲ್ಲಿದ್ದರೂ ಕೆಲವೆಡೆ ಹೊಯ್ಸಳರ ಶೈಲಿಯನ್ನು ಅನುಕರಿಸಿದಂತಿದೆ. ಈ ಬಗೆಯ ದೇವಾಲಯ ಇಡೀ ಮೈಸೂರು ರಾಜ್ಯದಲ್ಲೇ ಬೇರೆ ಇನ್ನೊಂದಿಲ್ಲವೆಂದು ಈ ಭಾಗ ಜನರು ಹೇಳುತ್ತಿದ್ದಾರೆ. ದೇವಾಲಯದ ಆಕೃತಿಯನ್ನು ಗಮನಿಸಿದರೆ ವೀರಶೈವರ ಪ್ರಭಾವವೂ ಎದ್ದುಕಾಣುತ್ತದೆ. ವಿಜಯನಗರ ಶೈಲಿಯದ್ದು ಎನ್ನುವ ವಾದವೂ ಇದೆ.

ಬೆಟ್ಟ, ಬಂಡೆ, ಗುಂಡುಗಳಿಂದ ಆಗಿರುವ ನೈಸರ್ಗಿಕ ಗವಿಯ ಪರಿಸರದಲ್ಲಿ ಬಂಡೆಯನ್ನು ಕೆತ್ತಿ ಶಿಲ್ಪಗಳನ್ನು ರಚಿಸಿದಿ ಈ ಬಗೆಯ ಏಕೈಕ ಗುಹಾಂತರ ದೇವಾಲಯವಿದು ಎಂಬುದು ವಿಶೇಷ. ದೇವಾಲಯಕ್ಕೆ ಎರಡು ಸುತ್ತಿನ ಕೋಟೆಯ ರಕ್ಷಣೆ ಇದೆ. ಪಕ್ಕದಲ್ಲಿಯೇ ರಾಮದುರ್ಗ ಎಂಬ ಪುಟ್ಟ ಗ್ರಾಮ ಇರುವುದರಿಂದ ರಾಮಲಿಂಗೇಶ್ವರ ಎಂಬ ಹೆಸರು ಬಂತು ಎನ್ನುತ್ತಾರೆ. ಈ ಗುಡ್ಡವು ನೆಲ ಮಟ್ಟದಿಂದ 200 ಅಡಿಗಳಷ್ಟು ಎತ್ತರವಿದ್ದು, ಮೇಲೆ ಕಟ್ಟಿರುವ ಕೋಟೆ ದೂರದಿಂದಲೇ ನೋಡುಗರ ಗಮನ ಸೆಳೆಯುತ್ತದೆ. ಅಲ್ಲಲ್ಲಿ ಕೋಟೆಯ ಕಲ್ಲುಗಳು ಬಿದ್ದಿದ್ದರೂ, ಹೊರಕೋಟೆ ಈಗಲೂ ಸಾಕಷ್ಟು ಸುಸ್ಥಿತಿಯಲ್ಲಿ ನಿಂತಿದೆ. ಒಳಹೊಕ್ಕರೆ ಒಳ ಕೋಟೆಯ ಗೋಡೆಯು ಕಾಣುತ್ತದೆ.

ಗುಡ್ಡದ ಮೇಲೆ ಮಕ್ಕಳು ಹಾಗೂ ದೊಡ್ಡವರು ಸಣ್ಣ ಪುಟ್ಟ ಕಲ್ಲುಗಳಿಂದ ಮನೆ/ ಗೂಡುಗಳನ್ನು ನಿರ್ಮಿಸಿರುವುದು ಕಾಣಸುತ್ತದೆ. ಇಲ್ಲಿಗೆ ಬರುವ ಭಕ್ತಾಧಿಗಳು ಮನಸ್ಸಿನಲ್ಲಿ ಕೋರಿಕೆಯೊಂದನ್ನು ಇಟ್ಟುಕೊಂಡು ಈ ಗೂಡು ಅಥವಾ ಪುಟ್ಟ ಮನೆಗಳನ್ನು ಕಟ್ಟುತ್ತಾರೆ. ದಕ್ಷಿಣದತ್ತ ಮುಂದುವರಿದು, ಒಳಕೋಟೆಯ ನೈರುತ್ಯಕ್ಕೆ ಬಂದರೆ ತಗ್ಗಿನ ಪ್ರದೇಶದಲ್ಲಿ ಸಾಕಷ್ಟು ದೊಡ್ಡ ಗಾತ್ರದ ಸುಮಾರು 4 ಅಡಿ ಅಗಲ ಮತ್ತು 4 ಅಡಿ ಎತ್ತರದ ಬೃಹತ್ ನಂದಿಯ ವಿಗ್ರಹ, ರಾಮಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿದೆ. ಅಲ್ಲಿಯೇ ಕಣ್ಣಿಗೆ ಬೀಳುತ್ತದೆ– ಬೃಹತ್ ಮತ್ತು ಕಠಿಣ ಬಂಡೆಯಿಂದ ನಿರ್ಮಿಸಲಾದ ರಾಮಲಿಂಗೇಶ್ವರ ಗುಹಾಂತರ ದೇವಾಲಯ.

ದೇವಾಲಯದ ಒಳಗೆ ಕಂಬಗಳಲ್ಲಿನ ಚಿತ್ರಗಳು, ಛಾವಣಿ, ಗರ್ಭಗೃಹ ಇತ್ಯಾದಿಗಳನ್ನು ನೋಡುತ್ತಿದ್ದರೆ ಇಲ್ಲಿಯ ಕಲೆಗಾರಿಕೆ ಬೆರಗು ಹುಟ್ಟಿಸುತ್ತದೆ. ಸುಮಾರು 24 ಅಡಿ ಅಡ್ಡ ಮತ್ತು 200 ಅಡಿ ಉದ್ದ ಇರುವ ಒಳ ಭಾಗದಲ್ಲಿ ಬಂಡೆಯನ್ನು ಕೊರೆದು ರಚಿಸಿರುವ ದೇವಾಲಯ, ಬಾದಾಮಿ, ಐಹೊಳೆ